ಬಿಳಚಿಕಟ್ಟೆ ಸುಬ್ಬೇಗೌಡರ ಮಗಳ ಮದುವೆ, ಗಂಡು ನೇರಲಕುಡಿಗೆ ಕಾಡೇಗೌಡರ ಮಗ. ಮದುವೆ ಬಿಳಚಿಕಟ್ಟೆಯಲ್ಲೇ. ಅಲಂಕರಿಸಿದ ದಂಡಿಗೆಯಲ್ಲಿ ಬಂದ ದಿಬ್ಬಣವನ್ನು ಕೊಂಬು ಕಹಳೆ, ಕದಿ, ಗರ್ನಾಲ್ ಜಬರದಸ್ತಿನ ಜಂಬರದೊಂದಿಗೆ, ವಾದ್ಯ ಸಮೇತ ಎಳ್ಳಕ್ಕಿ ಬೀರಿ ಎದುರುಗೊಂಡು ಇನ್ನೇನು ಗಂಡು ಮಂಟಪ ಪ್ರವೇಶಿಸಬೇಕು, ಅಷ್ಟರಲ್ಲಿ ಗಂಡಿನ ಕಡೆ ಹಿರಿಯ ಬೆಟ್ಟಮಕ್ಕಿ ಮಂಜಯ್ಯನಾಯ್ಕರ "ಮದುವೆ ನಿಲ್ಲಿಸಿ" ಅಬ್ಬರ ಕೇಳಿ, ಅಕ್ಕಪಕ್ಕದಲ್ಲಿದ್ದವರು ವರನ ಮಂಟಪ ಪ್ರವೇಶ ತಡೆದರು! ಎಲ್ಲೋ ಗಡಿಬಿಡಿಯಲ್ಲಿದ್ದ ಹೆಣ್ಣಿನ ತಂದೆ ಸುಬ್ಬೇಗೌಡರು ಬೆದರಿ ಕಂಗಾಲಾಗಿ ಮುಖದಲ್ಲಿಳಿಯುತ್ತಿದ್ದ ಬೆವರು ಒರೆಸಿಕೊಳ್ಳುತ್ತಾ ಓಡಿ ಬಂದರು. ಬೆಟ್ಟಮಕ್ಕಿ ಮಂಜಯ್ಯ ನಾಯ್ಕರು, ವಾದ್ಯದ ತಮ್ಮುನತ್ತ ಬೆರಳು ತೋರುತ್ತಾ, "ಏನು ಸುಬ್ಬೇಗೌಡರೇ ಇದು, ಚೌರದ ತಮ್ಮು ಕಾಲಿನಲ್ಲಿ ಚರ್ಮದ ಕೆರ. ಜುಟ್ಟಿಗೆ ಮಲ್ಲಿಗೆ ಸರ. ಕ್ಷೌರಿಕರು ಕೆರ ಹಾಕುವುದು, ಜುಟ್ಟಿಗೆ ಮಲ್ಲಿಗೆ ಮುಡಿಯುವುದು ಸಂಪ್ರದಾಯ ನಿಷಿದ್ಧ. ಸಂಪ್ರದಾಯದ ವಿರುದ್ಧವೆಂದರೆ ಗಂಡಿನ ಕಡೆಯವರಿಗೆ ಕೆರದಲ್ಲಿ ಹೊಡೆದಂತೆ ಅಲ್ಲವೇ?"

ವಿಷಯ ಅರಿತ ಗಂಡಿನ ತಂದೆ ನೇರಲಕುಡಿಗೆ ಕಾಡೇಗೌಡರು ಮಧ್ಯೆ ಪ್ರವೇಶಿಸಿ ಮಂಜಯ್ಯನಾಯ್ಕರನ್ನು ಚಪ್ಪರದ ಬದಿಗೆ ಎಳೆದುಕೊಂಡು ಹೋಗಿ ಹೇಳಿದರು:

"ನೋಡಿ ನಾಯ್ಕರೇ, ಕ್ಷೌರಿಕರು ಕಾಲಿಗೆ ಚಪ್ಪಲಿ ಹಾಕಬಾರದು, ಜುಟ್ಟಿಗೆ ಹೂ ಮುಡಿಯಬಾರದು ಅಂತ ಯಾವ ಶಾಸ್ತ್ರದಲ್ಲಿ ಹೇಳಿದೆ. ಅವನು ಚಪ್ಪಲಿ ಹಾಕಿದರೆ, ಹೂಮುಡಿದರೆ ನಮ್ಮ ಘನಸ್ತಿಕೆಗೆ ಕುಂದುಂಟಾಗುವುದಾದರೂ ಹೇಗೆ? ನೀವು ತರ್ಲೆ ತೆಗೆದು ಗಲಾಟೆ ಮಾಡಿದರೆ ಮರ್ಯಾದೆ ಹೋಗುವುದು ನನ್ನದು. ಹುಟ್ಟಿದಲ್ಲಿಂದ ಹಿಡಿದು ಸಾಯುವವರೆಗೂ ನಮಗೆ ಬೇಕೇಬೇಕಾದ ಕ್ಷೌರಿಕನನ್ನು ಅವಮಾನಿಸುವುದು ನಿಮ್ಮ ದೊಡ್ಡಸ್ತಿಕೆಗೆ ಸರಿಯಲ್ಲ. ತಮ್ಮ ಜಾತಿಗೆ ಅವಮಾನವಾಯಿತೆಂದು ಹೇಳಿ ಯಾರಿಗೂ ಚೌರ ಮಾಡುವುದಿಲ್ಲವೆಂದು ಪಟ್ಟು ಹಿಡಿದು ಕೂತರೆ, ಗಡ್ಡಮೀಸೆ, ತಲೆಕೂದಲು ಬೆಳೆದು ನಾವೆಲ್ಲ ಕಾಡು ಮನುಷ್ಯರಂತಾಗಬೇಕಾದೀತು. ಮದುವೆ ಮಂಟಪದ ಬಗ್ಗೆ ಹೆಚ್ಚಿಗೆ ಯೋಚಿಸಬೇಡಿ. ಅದನ್ನು ನಮಗೆ ಬಿಡಿ. ನಿಮಗೆ ಸರಿಯಾದದ್ದು ಇಸ್ಪೀಟಾಟದ ಮಂಟಪ. ಬನ್ನಿ ಅಲ್ಲಿಗೆ ಹೋಗೋಣ" ಸಮಾಧಾನಿಸಿ ಇಸ್ಪೀಟ್ ಮಂಟಪ ಸೇರಿಸಿದರು. ಹೀಗೆ ಗಂಡಿನ ಕಡೆಯವರೇ ಒಪ್ಪದೇ ಹೋದಾಗ ಬೆಟ್ಟಮಕ್ಕಿ ನಾಯ್ಕರ, ದರ್ಪ–ವಾದ ಬಿದ್ದು ಹೋಗಿ ಮದುವೆ ಗಡದ್ದಾಗಿ ಹುಡಿ ಹಾರಿತೆನ್ನಿ! ಸಂಪ್ರದಾಯ ಕಟ್ಟುಕಟ್ಟಳೆ ಎತ್ತಿ ಕೂಗಾಡಿದ ನಾಯ್ಕರು, ಇಸ್ಪೀಟಾಟದಲ್ಲೂ ಸೋತು ಹೈರಾಣರಾಗಿ ಸಂಜೆಗತ್ತಲಲ್ಲಿ ಕರಗಿಹೋದರೆಂಬುದು ಅವರ ಬದುಕಿನ ವಿಷಾದದ ಸಂಗತಿಗಳಲ್ಲೊಂದು.

ಶುಭಸಮಾರಂಭಗಳಲ್ಲಿ ಮಾತ್ರ ವಾದ್ಯ ಊದುವ ಉಪಕಸುಬಾಗಿಸಿಕೊಂಡಿರಲಿಲ್ಲ ತಮ್ಮು. ನಮ್ಮೂರ ದೇವಸ್ಥಾನದಲ್ಲಿ ನಡೆಯುತ್ತಿದ್ದ ಜಾತ್ರೆ, ಹರಕೆ ಸಂದರ್ಭಗಳಲ್ಲೂ ಅವನದೇ ವಾದ್ಯ. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿ ಸಂಕ್ರಮಣ ಹೊಸೂರು ಪಂಜುರ್ಲಿ ದೇವಸ್ಥಾನದಲ್ಲಿ ನಡೆಯುತ್ತಿದ್ದ ಪೂಜೆ ಹಾಗೂ ಗಣಪಾತ್ರಿ ಬಳೆಗಾರ ನಾಗನ ಮೈಮೇಲೆ ಪಂಜುರ್ಲಿ ಆಳಿಕೆಯಾಗಲು ತಮ್ಮುವಿನ ವಾದ್ಯ ಅನಿವಾರ್ಯ.

ಸಂಕ್ರಮಣ ಬಂದರೆ ದೂರದೂರಿನಿಂದಲೂ ಭಕ್ತರು ಹೊಸೂರು ಕಾಡಿನ ನಡುವಿನ ಪಂಜುರ್ಲಿ ದೇವಸ್ಥಾನದಲ್ಲಿ ನೆರೆಯುತ್ತಿದ್ದರು. ಕಾಯಿಲೆಕಸಾಲೆ. ಕಳೆದು ಹೋದ ಜಾನುವಾರು, ಕಳುವಾದ ವಸ್ತು. ಆಗದವರು ಮಾಡಿಸಿದ ಮಾಟಕೃತಿಮ, ದೆವ್ವಪ್ರೇತಗಳ ಕಾಟ – ಹೀಗೆ ಹತ್ತುಹಲವು ಬಗೆ ಸಮಸ್ಯೆಗಳಿಗೆ ಪರಿಹಾರ ಕೊಡುವ ಶಕ್ತಿ ಪಂಜುರ್ಲಿಗೆ ಇತ್ತು. ಹಾಗಾಗಿ ಬಹುದೂರ ಖ್ಯಾತಿ ಹಬ್ಬಿ, ನೆರೆಯುತ್ತಿದ್ದದ್ದು ಭಕ್ತಾದಿಗಳ ಜಾತ್ರೆ!

ಹತ್ತು ಗಂಟೆ ಹೊತ್ತಿಗೆ ಭಟ್ಟರು ಪಂಜುರ್ಲಿಗೆ ವಾದ್ಯ, ಜೈಜಾಗಂಟೆ, ಶಂಖನಾದಗಳ